Slum Clearance Scheme at District and Taluk Level

31. Sri H. S. SIDDAPPA (Arsikere).—

Will the Minister for Municipal Administration be pleased to state :—

whether the Government has evolved any schemes for slum clearance at District and Taluka level in the State ?

Sri B. BASAVALINGAPPA (Minister for Municipal Administration).—

Yes, the State Government has evloved a scheme for major cities and big towns.

ಶ್ರೀ ಎಚ್. ಎನ್. ಸಿದ್ದಪ್ಪ.—" ರಾಜ್ಯ ಸರಕಾರದವರು ದೊಡ್ಡ ಪಟ್ಟಣಗಳಲ್ಲಿ ಹಾಗೂ ಪ್ರಮುಖ ನಗರಗಳಲ್ಲಿ ಕೊಳಚೆ ನಿರ್ಮೂಲನೆಗೆ ಸಂಬಂಧಿಸಿದಂತೆ ಯೋಜನೆಯೊಂದನ್ನು ತಯಾರಿಸಿದ್ದಾರೆ ". ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಅರಸೀಕೆರೆ ಟೌನ್ ಇದರಲ್ಲಿ ಸೇರಿದೆಯೇ ?

† ಶ್ರೀ ಬಿ. ಬಸವಲಿಂಗಪ್ಪ.—ಸೇರಿದೆ. ಅಲ್ಲಿಂದ ಯೋಜನೆ ತಯಾರಿಸಿ ಸರ್ಕಾರಕ್ಕೆ ಕಳಿಸಿದರೆ ಪರಿಶೀಲಿಸುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸೀಕೆರೆಯಲ್ಲಿ ಸುಮಾರು 3 ಸಾವಿರ ಮನೆಗಳಲ್ಲಿರುವ ಅವಿದ್ಯಾವಂತರು ಸ್ಲಂಗಳಲ್ಲಿ ವಾಸಮಾಡುತ್ತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಬಂದಿದೆ. ಹೊನ್ನೆ ನಾನು ಅಲ್ಲಿಗೆ ಹೋಗಿದ್ದಾಗ ಅದರ ಬಗ್ಗೆ ಸಲಹೆ ಕೊಟ್ಟಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ.—ಕೊಳಚೆ ಪ್ರದೇಶವನ್ನು ನಿರ್ಮೂಲಮಾಡಲು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಲು ಮತ್ತು ಒಂದು ಸಮಗ್ರ ಕಾಯಿದೆ ಮಾಡುವ ವಿಚಾರ ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಬೋರ್ಡನ್ನು ರಚಿಸುವ ವಿಚಾರ ಯೋಚನೆ ಮಾಡುತ್ತಿದ್ದರು. ಅದಕ್ಕೆ ಸಾಕಷ್ಟು ಹಣ ಒದಗಿಸಲು ಯೋಚನೆ ಮಾಡಿದ್ದೀರಾ ? ಈ ವಿಚಾರದಲ್ಲಿ ಇದ್ದ ಸರ್ಕಾರದ ಧೋರಣೆ ಬಗ್ಗೆ ಹೇಳುವುದೇನಾದರೂ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡಬೇಕು, ಬಹಳ ತೀವ್ರವಾಗಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು ಎಂಬುದು ಸರಕಾರದ ಯೋಚನೆಯಲ್ಲಿದೆ. ಮತ್ತು ಅದಕ್ಕೆ ಮದ್ರಾಸಿನಲ್ಲಿರುವ ರೀತಿಯಲ್ಲಿ ಒಂದು ಸ್ಲಂ ಬೋರ್ಡನ್ನು ಕೂಡ ರಚಿಸಬೇಕೆಂಬ ಅಭಿಪ್ರಾಯ ಕೂಡ ಇದೆ. ಅದಕ್ಕೆ ಸಂಬಂಧಪಟ್ಟ ಬಿಲ್ಲು ಇದೇ ಸಭೆಯಲ್ಲಿ ಸರಕಾರ ತರಲಿದೆ. ಮಾನ್ಯ ಶಾಮಣ್ಣನವರು ಮತ್ತಿತರ ಸದಸ್ಯರು ಈ ಬಗ್ಗೆ ತೋರಿಸುತ್ತಿರುವ ಆಶಕ್ತಿಯನ್ನು ಗಮನಿಸಿ ಸಹಾನುಭೂತಿಯಿಂದ ಈ ವಿಚಾರ ಪರಿಶೀಲಿಸಿ ಸರಕಾರ ಕೊಳಚೆ ಪ್ರದೇಶ ನಿರ್ಮೂಲಮಾಡಲು ತೀವ್ರವಾಗಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದು.

Sri C. M. ARUMUGAM.—Have they conducted a survey in the State of Mysore to find out the number of slums both at the district and taluk levels and the number of families residing in these slums ?

Sri B. BASAVALINGAPPA.—We have conducted a survey in Bangalore City. We have asked the Hubli-Dharwar Corporation to conduct a survey and we have also asked the bigger towns in the State to have a survey.

ಶ್ರೀ ಆರ್. ಎಸ್. ಪಾಟೀಲ್.—ಉತ್ತರದಲ್ಲಿ ದೊಡ್ಡ ಪಟ್ಟಣಗಳಲ್ಲಿ ಮತ್ತು ಪ್ರಮುಖ ನಗರಗಳಲ್ಲಿ ಕೊಳಚೆ ನಿರ್ಮೂಲನೆಗೆ ಯೋಜನೆ ಮಾಡಿರುವುದಾಗಿ ಹೇಳಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲೂ ಈ ಕೆಲಸ ಮಾಡಲಾಗುವುದೇ ? ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಯೋಜನೆ ಮಾಡಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾಡಿರುವ ಯೋಜನೆ ದೊಡ್ಡ ಪಟ್ಟಣಗಳಿಗೆ ಮತ್ತು ಕಾರ್ಪೊರೇಷನ್ ಪ್ರದೇಶಗಳಿಗೆ ಮಾತ್ರ ಸಂಬಂಧಪಟ್ಟಿರುವುದು. ಉಳಿದ ಪ್ರದೇಶಗಳಿಗೂ ಇದನ್ನು ಅನ್ವಯಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಎನ್ ಪಾಟೀಲ್.—ಕೊಳಚೆ ಪ್ರದೇಶದಲ್ಲಿರುವವರಿಗೆ ಇರುವ ತೊಂದರೆ ನಿವಾರಣೆ ಮಾಡಿ ಅವರಿಗೆ ಬೇರೆ ಕಡೆ ಸ್ಥಳ ಕೊಟ್ಟು ಸೋಷಿಯಲ್ ಸೆಕ್ಯೂರಿಟಿ ದೊರೆಯುವಂತೆ ಮಾಡಲು ಸರಕಾರ ಪ್ಲಾನ್ ಮಾಡಿದೆಯೇ ? ಅಥವಾ ಬರೇ ಹೆರಾಸ್‌ಮೆಂಟಿಗೆ ಪ್ಲಾನ್ ಮಾಡಿದೆಯೆ ?

ಶ್ರೀ ಬಿ. ಬಸವಲಿಂಗಪ್ಪ.—ಕೊಳಚೆ ಪ್ರದೇಶ ನಿರ್ಮೂಲ ಮಾಡಬೇಕಾದ್ದು ಸರಕಾರದ ಕರ್ತವ್ಯ. ಹಾಗೆ ಮಾಡುವಾಗ ಅದಕ್ಕೆ ತಕ್ಕ ಯೋಜನೆ ಮಾಡಿ ಜನರಿಗೆ ಅನುಕೂಲವಾಗುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಕೇಂದ್ರ ಸರಕಾರ ಬೆಂಗಳೂರಿನ ಕೊಳಚೆ ಪ್ರದೇಶ ನಿರ್ಮೂಲಮಾಡಿ ಅಭಿವೃದ್ಧಿ ಪಡಿಸಲು 1 ಕೋಟಿ 50 ಲಕ್ಷ ರೂಪಾಯಿ ಕೊಡಲಿದೆ. ಇದರ ಕೆಲಸ ಪ್ರಾರಂಭವಾಗಿದೆ. ಇದೇ ರೀತಿಯಲ್ಲಿ ಎಲ್ಲೆಲ್ಲಿ ಕೊಳಚೆ ಪ್ರದೇಶವಿದೆ ಅದನ್ನು ನಿರ್ಮೂಲ ಮಾಡಲು ಯೋಜನೆ ಬಂದಕೂಡಲೆ ಕೂಡಲೇ ಅದಕ್ಕೆ ಸೂಕ್ತ ಗಮನ ಕೊಡುತ್ತೇವೆ.

Sri S. M. YAHYA.—The Hon. Minister said that there are schemes for slum clearance. Could he give the nature and the salient features of some of these schemes ?

ಶ್ರೀ ಬಿ. ಬಸವಲಿಂಗಪ್ಪ.—ಕೋಳಚೆ ಪ್ರದೇಶವಿರುವ ಕಡೆಯ ಅಧಿಕಾರಿಗಳು ಮತ್ತು ಮಾನ್ಯ ಸದಸ್ಯರು ಎಲ್ಲಾ ಸೇರಿ ಒಂದು ಯೋಜನೆ ಮಾಡಿ ಸರಕಾರಕ್ಕೆ ಕಳಿಸಿದರೆ ಸರಕಾರ ಅದನ್ನು ನಿರ್ಮೂಲಮಾಡಲು ಸೂಕ್ತ ಕ್ರಮ ಕೈಕೊಳ್ಳುವುದು. ಈಗ ಹೀಗೆ ಮಾಡಬೇಕು ಎಂದೇನೂ ನಿರ್ದೇಶ ಕೊಟ್ಟಿಲ್ಲ.

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆಯಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಜನರು ಸ್ಥಳ ಏಲ್ಲದೆ ಹೊರಗಡೆ ಜೀವನಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ ? ಅವರಿಗಿರುವ ತೊಂದರೆ ನಿವಾರಣೆ ಮಾಡಲು ಇದುವರೆಗೇನು ಕ್ರಮ ಕೈಕೊಂಡಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಈ ವಿಚಾರದಲ್ಲಿ ಅಸಕ್ತಿ ವಹಿಸಿ ಯೋಜನೆ ತಯಾರಿಸಿ ಸಂಬಂಧಪಟ್ಟವರಿಂದ ಸರಕಾರಕ್ಕೆ ಕಳಿಸಿದರ ಅದನ್ನು ಮುಂಜೂರು ಮಾಡಲು ಪ್ರಯತ್ನ ಮಾಡುತ್ತೇವೆ. ಅಲ್ಲದೆ ಯಾರಿಗೆ ನಿವೇಶನವಿಲ್ಲ ಯಾರು ಕನಿಷ್ಠ ಜೀವನ ಮಾಡುತ್ತಿದ್ದಾರೆ ಅವರೆಲ್ಲರಿಗೂ ಒಳ್ಳೆಯ ಜೀವನ ನಡೆಸಲು ಅನುಕೂಲವಾಗುವಂತೆ ನಿವೇಶನ ಕೊಡುವ ಯೋಜನೆ ಇದೆ. ಮಾನ್ಯ ಸದಸ್ಯರು ಇದನ್ನು ಗಮನಿಸಿ ಆಸಕ್ತಿ ವಹಿಸಿದರೆ ಎಲ್ಲವೂ ಸರಿಹೋಗ ಬಹುದು.

ಶ್ರೀ ಗೋಪಿನಾಥ ಆರ್ ಸಾಂದ್ರ.—ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಒಂದು ಯೋಜನೆ ಮಾಡಿ ಸರಕಾರಕ್ಕೆ ಕಳಿಸಿದೆ. ಆದರೆ ಸರಕಾರವೇಕೆ ಅದರಮೇಲೆ ಕ್ರಮ ತೆಗೆದು ಕೊಂಡಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ರಾಜ್ಯ ಸರಕಾರದಲ್ಲಿರುವ ಕೊಳಚೆಯನ್ನು ನಿರ್ಮೂಲ ಮಾಡಲು ಸರಕಾರ ಯೋಚನೆ ಮಾಡಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಯೋಜನೆ ಮಾಡಿ ಕಳಿಸಿದರೆ ಪರಿಶೀಲಿಸುವುದಾಗಿ ಹೇಳಿದರು. ಅರಸೀಕೆರೆಯಲ್ಲಿ 3 ಸಾವಿರ ಆದಿದ್ರಾವಿಡರು ಕೊಳಚೆ ಪ್ರದೇಶದ ಬಗ್ಗೆ ಸರಕಾರಕ್ಕೆ ಒಂದು ಯೋಜನೆ ಕಳಿಸಿದೆ. ಜಾಗ್ರತೆಯಾಗಿ ಅವರಿಗೆ ಮನೆ ಒಳ್ಳೆಯ ಕಡೆ ಕಟ್ಟಿಸಿಕೊಟ್ಟು ಅವರ ಕಷ್ಟ ವನ್ನು ನಿವಾರಣೆ ಮಾಡುವಿರಾ ?

ಶ್ರೀ ಬಿ. ಬಸವಲಿಂಗಪ್ಪ.—ವಿಚಾರಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾನಲುನಾಯ್ಡು.—ಕೊಳಚೆ ಪ್ರದೇಶ ಈಗ ಬೆಳೆಯುತ್ತಿದೆ. ಅದನ್ನು ತಡೆಗಟ್ಟಲು ಯೋಚನೆ ಮಾಡಲಾಗಿದೆಯೇ ? ಆ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಕೊಳಚೆ ಪ್ರದೇಶವನ್ನು ನಿರ್ಮೂಲಮಾಡಲು ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ರಚಿಸಬೇಕೆಂದು ಯೋಚನೆಮಾಡಿದ್ದೇವೆ. ಮತ್ತು ಶೀಘ್ರವಾಗಿ ಈ ಕೆಲಸವನ್ನು ಕಾರ್ಯಗತಮಾಡಲು ಒಂದು ಸಮಿತಿ ಮಾಡಬೇಕೆಂಬ ಯೋಚನೆ ಇದೆ. ಈ ಸಂಬಂಧವಾಗಿ ಒಂದು ಬಿಲ್ಲನ್ನು ತಂದು ಬೋರ್ಡನ್ನು ರಚಿಸಬೇಕೆಂಬ ಅಭಿಪ್ರಾಯವಿದೆ. ಇದರಿಂದ ಶೀಘ್ರವಾಗಿ ಸದಸ್ಯರ ಕಳವಳವೇನಿದೆ ಅದು ಪರಿಹಾರವಾಗಬಹುದು.

Road Works in Dharwar District

46. **Sri B. G. BANAKAR** (Hirekerur).—

Will the Minister for Revenue be pleased to state :—

(*a*) the road works sanctioned under the scarcity head in Dharwar District ;

(*b*) the number of them that are brought to a safe stage ;

(*c*) when the Government propose to bring them to a safe stage ?

Sri N. HUTCHAMASTHY GOWDA (Minister for Revenue).—

(*a*) Particulars of road works sanctioned and executed during 1971–72 are found in the statement appended.

(*b*) All the road works taken up have been completed and brought to a safe stage.

(*c*) Does not arise.